10/02/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ತಂದೆಗೆ ಎಲ್ಲಾ ಗೊತ್ತಿರುವವರು ಎಂದು ಭಲೆ ಹೇಳುತ್ತಾರೆ ಆದರೆ ಪ್ರತಿಯೊಬ್ಬರು ತಮ್ಮ ಸಮಾಚಾರವನ್ನು ಖಂಡಿತ ತಿಳಿಸಬೇಕು, ಸಮಾಚಾರವನ್ನು ತಿಳಿಸಿದಾಗ ಎಚ್ಚರಿಕೆ ಸಿಗುತ್ತದೆ"

ಪ್ರಶ್ನೆ: ಬೇಹದ್ದಿನ ಸೃಷ್ಟಿಯನ್ನು ಸ್ವರ್ಗವನ್ನಾಗಿ ಮಾಡಬೇಕಾಗಿದೆ, ಆದ್ದರಿಂದ ಬುದ್ಧಿವಂತ ಮಕ್ಕಳ ಕಾರ್ಯ ಯಾವುದಾಗಿದೆ?

ಉತ್ತರ: ಪ್ರತಿಯೊಬ್ಬರ ಯಥಾರ್ಥ ಸಮಾಚಾರವನ್ನು ತಂದೆಗೆ ಕೊಡಬೇಕು. ತಂದೆಗೆ ಸಮಾಚಾರವನ್ನು ಕೊಟ್ಟಾಗ ನಿಮ್ಮಲ್ಲಿ ಈ ಭೂತ ಇರುವ ಕಾರಣ ಡಿಸ್ಸರ್ವೀಸ್ ಆಗುತ್ತದೆ ಎಂದು ತಂದೆ ಶಿಕ್ಷಣವನ್ನು ಕೊಡುತ್ತಾರೆ. ತಮ್ಮ ಚಲನೆಯನ್ನು ಸುಧಾರಣೆ ಮಾಡಿಕೊಳ್ಳಿ. ದೇಹಾಭಿಮಾನದ ಇಚ್ಛೆಗಳನ್ನು ತ್ಯಾಗ ಮಾಡಿ. ಬೇಹದ್ದಿನ ಸೃಷ್ಟಿಯನ್ನು ಸ್ವರ್ಗವನ್ನಾಗಿ ಮಾಡಬೇಕು, ಆದ್ದರಿಂದ ತಂದೆಗೆ ಎಲ್ಲರಿಗೆ ಜ್ಞಾನ ಸಿಗಲಿ ಎಂದು ಎಲ್ಲರ ಪ್ರತಿ ದೃಷ್ಟಿ ಇರುತ್ತದೆ, ಬಡವರ ಮೇಲಂತೂ ಮುಖ್ಯವಾಗಿ ಗಮನ ಇರುತ್ತದೆ.

ಗೀತೆ: ನನಗೆ ಆಶ್ರಯ ಕೊಡುವವರು....

ಓಂ ಶಾಂತಿ. ಯಾರು ಒಳ್ಳೆಯ ಪುರುಷಾರ್ಥಿ ನಿಶ್ಚಯ ಬುದ್ಧಿಯವರಾಗಿದ್ದಾರೆ ಅವರಂತೂ ತಿಳಿದುಕೊಳ್ಳುತ್ತಾರೆ - ಪರಮಪಿತ ಪರಮಾತ್ಮ, ಯಾರಿಗೆ ಜೀವನವನ್ನು ಅರ್ಪಣೆ ಮಾಡುತ್ತಾರೆ, ಅವರದೇ ಮಹಿಮೆಯಾಗಿದೆ - ಯಾರು ಇದ್ದು ಹೋಗುತ್ತಾರೆ ಅವರ ಕರ್ತವ್ಯದ ಮೇಲೆ ಮಹಿಮೆ ಮಾಡುತ್ತಾರೆ. ಕೆಲವರ ಮಹಿಮೆಯನ್ನು ತಿಳಿದುಕೊಳ್ಳುತ್ತಾರೆ, ಕೆಲವರ ಮಹಿಮೆಯನ್ನು ತಿಳಿದುಕೊಳ್ಳುವುದಿಲ್ಲ. ತಾವು ಮಕ್ಕಳಂತೂ ಎಲ್ಲರ ಮಹಿಮೆಯನ್ನು ತಿಳಿದುಕೊಂಡಿದ್ದೀರಿ. ಬಾಬಾರವರಿಗೆ ಎಲ್ಲಾ ಗೊತ್ತಿರುವವರು (ಜಾನಿ ಜಾನನಹಾರ್) ಎಂದು ಹೇಳುತ್ತಾರೆ. ಆದರೆ ಮಕ್ಕಳು ಅದರ ಅರ್ಥವನ್ನು ಯಥಾರ್ಥವಾಗಿ ತಿಳಿದುಕೊಂಡಿಲ್ಲ. ಎಷ್ಟು ಮಕ್ಕಳು ತಿಳಿದುಕೊಂಡಿದ್ದಾರೆ, ನಮ್ಮ ಹೃದಯದ ಮಾತುಗಳಂತೂ ತಂದೆಗೆ ಗೊತ್ತಿದೆ. ನಾವು ಇನ್ನೇನು ಬರೆಯುವುದು, ಆದರೆ ಇದು ತಪ್ಪಾಗಿದೆ. ತಂದೆಯಂತೂ ಒಬ್ಬರೇ ಆಗಿದ್ದಾರೆ. ಇಷ್ಟು ಮಕ್ಕಳ ಸಂಕಲ್ಪಗಳನ್ನು ಓದಲು ಸಾಧ್ಯವೇ! ತಂದೆಯಂತೂ ಇಲ್ಲಿ ಬರುತ್ತಾರೆ, ಬಂದು ಟೀಚರ್ ರೂಪದಲ್ಲಿ ಓದಿಸುತ್ತಾರೆ. ಅಂದಾಗ ಇವರು ಹೇಗೆ ಓದುತ್ತಾರೆ? ನಿಶ್ಚಯ ಬುದ್ಧಿಯವರಾಗಿದ್ದಾರೋ ಇಲ್ಲವೋ? ಎಂದು ತಿಳಿಯುತ್ತಾರೆ. ಪರಮಧಾಮದಲ್ಲಿ ಕುಳಿತು ಈ ಯೋಚನೆ ಮಾಡುತ್ತಾರೆ ಎಂದಲ್ಲ. ಈ ರೀತಿ ತಿಳಿಯುವುದು ಮಕ್ಕಳ ತಪ್ಪಾಗಿದೆ. ಬಾಬಾ ನಿಮಗೆ ಎಲ್ಲಾ ಗೊತ್ತಿದೆ ನಾವು ಯಾವ ಸಮಾಚಾರ ಬರೆಯುವುದು ಎಂದು ಬರೆಯುತ್ತಾರೆ. ಆದರೆ ಈ ರೀತಿ ಅಲ್ಲ. ತಮ್ಮ ಚಲನೆಯ, ವಿದ್ಯೆಯ ಸಮಾಚಾರವನ್ನು ಓದಿಸುವವರಿಗೆ ಬ್ರಹ್ಮನ ಮೂಲಕ ಕೊಡಬೇಕು. ಪೋಸ್ಟ್ ಆಫೀಸ್ ಮೂಲಕ ಕೇಳಬೇಕು. ತಮಗಂತೂ ಎಲ್ಲಾ ಗೊತ್ತಿದೆ - ಈ ರೀತಿ ಅಲ್ಲ. ನಾವು ಬಾಬಾರವರಿಂದ ಮುಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ. ಇದಕ್ಕೆ ಅಂಧಶ್ರದ್ಧೆ ಎಂದು ಹೇಳಲಾಗುತ್ತದೆ. ಬಾಬಾರವರಿಗೆ ಬ್ರಹ್ಮನ ಮೂಲಕ ಸಮಾಚಾರವನ್ನು ಕೊಡಬೇಕಾಗುತ್ತದೆ. ಅನೇಕ ಪ್ರಕಾರದ ಮಕ್ಕಳು ಇರುತ್ತಾರಲ್ಲವೇ. ಪ್ರತಿಯೊಬ್ಬರು ತಮ್ಮ ಸಮಾಚಾರವನ್ನು ಕೊಡಬೇಕಾಗುತ್ತದೆ ಆದ್ದರಿಂದ ಪ್ರತಿಯೊಂದು ಸೇವಾಕೇಂದ್ರವನ್ನು ಕೇಳಲಾಗುತ್ತದೆ - 12 ತಿಂಗಳುಗಳು ಬರುವವರ ರಿಜಿಸ್ಟರ್ ಮತ್ತು ಪ್ರತಿಯೊಬ್ಬರ ಆಕ್ಯುಪೇಷನ್ ಬರೆದು ಕಳುಹಿಸಿ. ಒಂದುವೇಳೆ ಬಾಬಾರವರಿಗೆ ಗೊತ್ತಿದ್ದರೆ ಕಳುಹಿಸಿ ಎಂದು ಏಕೆ ಕೇಳುತ್ತಾರೆ! ಯಾವುದು ಶಿವಬಾಬಾರವರಿಗೆ ಗೊತ್ತಾಗಬೇಕೋ ಅದು ಬ್ರಹ್ಮಾರವರಿಗೂ ಗೊತ್ತಾಗಬೇಕು. ಇವರ ಮೂಲಕವೇ ತಿಳಿಸಬೇಕಲ್ಲವೇ. ಟೆಲಿಗ್ರಾಮ್ ಸಹ ಯಾರ ಮೂಲಕನಾದರೂ (ತ್ರೂ) ಆಗುತ್ತದೆಯಲ್ಲವೇ. ಆಪರೇಟರ್ ಬೇಕಾದರೆ ಕೇಳಬಹುದು ಆದರೆ ಆ ರೀತಿ ಮಾಡಬಾರದು. ಬೇಕಾದರೆ ಕೇಳಬಹುದು. ಅವರ ಹತ್ತಿರ ಸ್ಪಷ್ಟವಾಗಿ ಕೇಳಿಸುತ್ತದೆ. ಅಂದಾಗ ಇಲ್ಲೂ ಸಹ ಎಲ್ಲರೂ ಸಮಾಚಾರವನ್ನು ತಿಳಿಸಬೇಕು. ಮಧ್ಯದಲ್ಲಿ ಯಾರಿಗಾದರೂ ಗೊತ್ತಾಗಲಿಲ್ಲವೆಂದರೆ ಬಿ.ಕೆ ನಿಮಿತ್ತರಾಗಿದ್ದಾರೆ ಸಮಾಚಾರವನ್ನು ಕೊಡಲು. ಯಾರು ಜ್ಞಾನದಲ್ಲಿ ಪರಿಪಕ್ವ ಅನನ್ಯ ಮಕ್ಕಳು ಇದ್ದಾರೆ - ಅವರ ಕಾರ್ಯವಾಗಿದೆ ಪೂರ್ತಿ ಸಮಾಚಾರವನ್ನು ಕೊಡುವುದು. ಪ್ರತಿಯೊಬ್ಬರು ಕಾರ್ಖಾನೆಯ ಸಮಾಚಾರವನ್ನು ಕೊಡಬೇಕು. ಬುದ್ಧಿವಂತ ಮಕ್ಕಳು ಬರೆಯುತ್ತಾರೆ - ಬಾಬಾ ಪುನಃ ಅವರಿಗೆ ಶಿಕ್ಷಣವನ್ನು ಕೊಡುತ್ತಾರೆ. ಇಲ್ಲವೆಂದರೆ ಚಲನೆ ಸುಧಾರಣೆ ಆಗುವುದಿಲ್ಲ. ಪೂರ್ತಿ ಗುಣಗಳನ್ನು ಧಾರಣೆ ಮಾಡುವುದಿಲ್ಲ. ದೇಹಾಭಿಮಾನ ಬಹಳ ಇದೆ. ದೇಹಾಭಿಮಾನದ ಇಚ್ಛೆಗಳು ಬಹಳ ಇದೆ. ಬುದ್ಧಿವಂತ ಮಕ್ಕಳು ಇಂತಿಂತಹ ಕಾರಣದ ಮೂಲಕ ಡಿಸ್ಸರ್ವೀಸ್ ಆಗುತ್ತದೆ ಎಂದು ತಕ್ಷಣ ಸಮಾಚಾರವನ್ನು ಕೊಡುತ್ತಾರೆ. ಈ ಭೂತವಿದೆ, ತೆಗೆದು ಹಾಕಿ, ಇಲ್ಲವೆಂದರೆ ಪದವಿ ಭ್ರಷ್ಟರಾಗಿ ಬಿಡುತ್ತೀರಿ ಎಂದು ಬಾಬಾ ಎಚ್ಚರಿಕೆಯನ್ನು ಕೊಡುತ್ತಾರೆ.

ಬಾಬಾ ಬೇಹದ್ದಿನ ಸೃಷ್ಟಿಯನ್ನು ಸ್ವರ್ಗವನ್ನಾಗಿ ಮಾಡುವವರು, ಇವರನ್ನು ಮೇಲೆ ಎತ್ತಬೇಕು ಎಂಬ ದೃಷ್ಟಿ ಎಲ್ಲರಿಗಾಗಿ ಇರುತ್ತದೆ. ಮುಖ್ಯವಾಗಿ ಬಡವರ ಮೇಲೆ ಗಮನ ಹೋಗುತ್ತಿರುತ್ತದೆ. ಸದಾ ಬಡವರಿಗೆ ದಾನ ಕೊಡಲಾಗುತ್ತದೆ. ಬಡವರೇ ನಿಮಿತ್ತರಾಗಿದ್ದಾರೆ. ರಾಜ್ಯ ಸ್ಥಾಪನೆ ಆಗುತ್ತಿದೆ. ಪ್ರಜೆಗಳಂತೂ ಬಹಳ ಇದ್ದಾರೆ. ಬ್ರಿಟೀಷ್ ಸರ್ಕಾರ ಇತ್ತು ಅಂದಾಗ ಬಡೌದಾ,

ಗ್ವಾಲಿಯರ್ನ ರಾಜರು ಯಾರು ಇದ್ದರು - ಅವರಲ್ಲಿ ಒಬ್ಬ ರಾಜಾ, ಒಂದು ರಾಣಿ ಮತ್ತು ಬಾಕಿ ಎಲ್ಲಾ ಪ್ರಜೆಗಳು ಇದ್ದರು. ಕೆಲವರಿಗೆ 20ಲಕ್ಷ ಪ್ರಜೆಗಳು, ಕೆಲವರಿಗೆ 30 ಲಕ್ಷ ಪ್ರಜೆಗಳು.... ನಂಬರ್ವಾರಾಗಿ ಇದ್ದರು. ಅಂದಾಗ ದರ್ಬಾರಿನಲ್ಲಿ ಎಲ್ಲಾ ರಾಜರನ್ನು ಕರೆಯುತ್ತಾರೆ. ದರ್ಬಾರ್ ಸಹ ನಂಬರ್ವಾರಾಗಿ ಕುಳಿತುಕೊಳ್ಳುತ್ತಿದ್ದರು. ಮಹಾರಾಜರ ಸಾಲು ಬೇರೆ, ರಾಜರ ಸಾಲು ಬೇರೆ, ಸಲಹೆ ಕೊಡುವವರು ಮುಂತಾದವರು ಬಹಳ ಬಿರುದುಗಳು ಇರುವವರು ನಂಬರ್ವಾರಾಗಿದ್ದಾರೆ. ಇಲ್ಲೂ ಸಹ ಅದೇ ರೀತಿ ಇದ್ದಾರೆ. ಶ್ರೇಷ್ಠಾತಿ ಶ್ರೇಷ್ಠ ತಂದೆಯಾಗಿದ್ದಾರೆ, ಅವರಿಗಂತೂ ಎಲ್ಲರೂ ಗೌರವ ಕೊಡಬೇಕು. ತಂದೆಯೇ ಬಂದು ಕಲ್ಪ-ಕಲ್ಪ ಭಾರತವನ್ನು ಸ್ವರ್ಗವನ್ನಾಗಿ ಮಾಡುತ್ತಾರೆ. ಭಾರತವಾಸಿಗಳು ತಂದೆಗೆ ನಿಂದನೆ ಮಾಡುವುದು ಶುರು ಮಾಡಿ ಬಿಡುತ್ತಾರೆ. ಸತೋಪ್ರಧಾನದಿಂದ ಸತೋ, ರಜೋ, ತಮೋನಲ್ಲಿ ಖಂಡಿತ ಬೀಳಲೇ ಬೇಕಾಗುತ್ತದೆ. ಅಂದಾಗ ಶ್ರೇಷ್ಠಾತಿ ಶ್ರೇಷ್ಠ ಭಗವಂತ, ನಂತರ ಅವರ ಜೊತೆ ಸಂಬಂಧವನ್ನು ಜೋಡಿಸುವವರು ಬ್ರಹ್ಮಾ, ವಿಷ್ಣು, ಶಂಕರ ಸೂಕ್ಷ್ಮವತನವಾಸಿಯರು. ವೃಕ್ಷದ ಕುರಿತು ಗೊತ್ತಿರಬೇಕಲ್ಲವೇ. ತಂದೆಗೆ ವೃಕ್ಷದ ಜ್ಞಾನಪೂರ್ಣರು ಎಂದು ಹೇಳಲಾಗುತ್ತದೆ. ಮತ್ತೆ ಬೇರೆ ಯಾರಲ್ಲೂ ಜ್ಞಾನವಿಲ್ಲ. ಅಂದಾಗ ಶ್ರೇಷ್ಠಾತಿ ಶ್ರೇಷ್ಠ ತಂದೆ ನಂತರ ಬ್ರಹ್ಮಾ-ವಿಷ್ಣು-ಶಂಕರ ನಂತರ ಪ್ರಜಾಪಿತ ಬ್ರಹ್ಮಾ ಮತ್ತು ಜಗದಾಂಬಾ, ಮಾತಾ-ಪಿತಾ ಪ್ರಸಿದ್ಧ ಆಗಿದ್ದಾರೆ. ಜಗದಾಂಬ ಸರಸ್ವತಿ ಬ್ರಹ್ಮನ ಮಗಳಾಗಿದ್ದಾರೆ. ಅವರದೂ ಸಹ ಒಂದು ಹೆಸರು ಇರಬೇಕು. ಕೆಲವರು ಅಂಬ ಎಂದು ಹೇಳುತ್ತಾರೆ, ಕೆಲವರು ಕಾಳಿ ಎಂದು ಹೇಳುತ್ತಾರೆ, ಕೆಲವರು ಸರಸ್ವತಿ ಎಂದು ಹೇಳುತ್ತಾರೆ. ಅನೇಕ ಹೆಸರುಗಳನ್ನು ಇಟ್ಟಿದ್ದಾರೆ. ಇವರು ಪ್ರಜಾಪಿತ ಬ್ರಹ್ಮಾ ಮತ್ತು ಬಿ.ಕೆ.ಸರಸ್ವತಿ. ಸರಸ್ವತಿಯವರ ಹತ್ತಿರ ವೀಣೆಯನ್ನು ತೋರಿಸುತ್ತಾರೆ. ಮೊಟ್ಟ ಮೊದಲನೇ ಗಾಡೆಜ್ ಆಫ್ ನಾಲೆಜ್ ಆಗಿದ್ದಾರೆ. ಹೇಗೆ ಬ್ರಹ್ಮಾರವರಿಗೆ ಜ್ಞಾನದ ಮುರಳಿಯನ್ನು ಕೊಟ್ಟಿದ್ದಾರೆ, ಅವರಿಗೆ ವೀಣೆಯನ್ನು ಕೊಟ್ಟಿದ್ದಾರೆ. ಮೊಟ್ಟ ಮೊದಲು ಮುಖ್ಯ ಗಾಡೆಜ್ ಆಫ್ ನಾಲೆಜ್ ಸರಸ್ವತಿ, ಜಗದಾಂಬ. ಯಾವ ನಾಲೆಜ್ ಆಗಿದೆ? ಇವರಿಗೆ ಯಾರು ಕೊಟ್ಟಿದ್ದಾರೆ? ಜ್ಞಾನ ಸಾಗರ ಕೊಟ್ಟಿದ್ದಾರೆ. ಜ್ಞಾನ ಸಾಗರ ತಂದೆಯಿಂದ ಈ ಬ್ರಹ್ಮಾರವರು ಕಲಿತಿದ್ದಾರೆ ಅಂದಾಗ ಮಕ್ಕಳೂ ಸಹ ಕಲಿತಿದ್ದಾರೆ. ಅವರು ಮತ್ತೆ ಜ್ಞಾನ-ಜ್ಞಾನೇಶ್ವರಿಯಿಂದ ರಾಜ-ರಾಜೇಶ್ವರಿ ಆಗುತ್ತಾರೆ. ತತ್ವಂ. ಬ್ರಹ್ಮಾ ಮತ್ತು ಸರಸ್ವತಿ. ಇಬ್ಬರು ಜ್ಞಾನ-ಜ್ಞಾನೇಶ್ವರಿ ಆಗಿದ್ದಾರೆ. ಈಶ್ವರನಿಂದ ಸಹಜ ರಾಜಯೋಗದ ಜ್ಞಾನವನ್ನು ಪಡೆದು ರಾಜ್ಯಭಾಗ್ಯವನ್ನು ಪಡೆದುಕೊಂಡಿದ್ದಾರೆ. ತತ್ವಂ. ಲಕ್ಷ್ಮೀ-ನಾರಾಯಣ ಒಂಟಿಯಾಗಿ ಇರುತ್ತಾರೇನು. ರಾಜಧಾನಿ ಸ್ಥಾಪನೆ ಆಗುತ್ತಿದೆ. ಎಷ್ಟು ಬ್ರಾಹ್ಮಣಿಯರಿದ್ದಾರೆ, ಓದುತ್ತಿದ್ದಾರೆ ಯಾರು ಪುನಃ ಪೂಜ್ಯ ರಾಜಾ-ರಾಣಿ ಆಗುತ್ತಾರೆ. ಪುನಃ ಸತೋಪ್ರಧಾನದಿಂದ ಸತೋನಲ್ಲಿ ಬರುತ್ತಾರೆ ಎಂದರೆ ಕಲೆಗಳು ಕಡಿಮೆ ಆಗುತ್ತದೆ ನಂತರ ರಜೋ-ತಮೋನಲ್ಲಿ ಬಂದು ಪೂಜ್ಯರಿಂದ ಪೂಜಾರಿ ಆಗಿ ಬಿಡುತ್ತಾರೆ. ತಾವೇ ಪೂಜ್ಯರಾಗಿದ್ದಿರಿ, ತಾವೇ ಪೂಜಾರಿ ಆಗಿ ಬಿಟ್ಟಿದ್ದೀರಿ. ಇದು ಪರಮಾತ್ಮನಿಗೆ ಗಾಯನವಿಲ್ಲ. ಅವರು ಹೇಗೆ ಪೂಜಾರಿ ಆಗುತ್ತಾರೆ. ನಾವು ರಜೋ-ತಮೋನಲ್ಲಿ ಬಂದು ಪೂಜಾರಿ ಆಗಿದ್ದೇವೆ. ಬಾಬಾ ತಿಳಿಸಿದ್ದಾರೆ - ವಾಸ್ತವದಲ್ಲಿ ಧರ್ಮ ಶಾಸ್ತ್ರ ಇರುವುದೇ 4, ಶ್ರೀಮತ್ಭಗವತ್ ಗೀತೆ, ಮುಖ್ಯವಾಗಿದೆ. ಗೀತೆ ತಂದೆಯಾಗಿದೆ ಬಾಕಿ ಅದರ ಮಕ್ಕಳಾಗಿವೆ, ಇಸ್ಲಾಮಿ, ಬೌದ್ಧ ಮುಂತಾದ ಧರ್ಮದವರು. ಶ್ರೇಷ್ಠಾತಿ ಶ್ರೇಷ್ಠ ಗೀತೆ ಆಗಿದೆ ನಂತರ ಮುಸಲ್ಮಾನರ ಶಾಸ್ತ್ರವಾಗಿದೆ. ಧರ್ಮ ಸ್ಥಾಪನೆಯ ಮುಖ್ಯ ಶಾಸ್ತ್ರ ಇದಾಗಿದೆ. ಮೊಟ್ಟ ಮೊದಲು ದೇವೀ ದೇವತಾ ಧರ್ಮ ಅದರ ಶಾಸ್ತ್ರವಾಗಿದೆ ಗೀತೆ. ಅದರ ರಚಯಿತ ಪರಮಪಿತ ಪರಮಾತ್ಮ ಆಗಿದ್ದಾರೆ. ಅವರೇ ಜ್ಞಾನಸಾಗರರಾಗಿದ್ದಾರೆ. ಖಂಡಿತ ಅವರನ್ನು ಉನ್ನತ ಸ್ಥಾನದಲ್ಲಿ ಇಡಬೇಕು. ಬಾಕಿ ಎಲ್ಲಾ ಅವರ ವಂಶಾವಳಿ ಆಗಿದೆ. ದೇವೀ-ದೇವತೆಗಳದ್ದು ಮುಖ್ಯ ವಂಶವಾಗಿದೆ. ನಂತರ ಮುಸಲ್ಮಾನರದ್ದು, ಬೌದ್ಧರ ವಂಶವಾಗಿದೆ. ಶ್ರೇಷ್ಠಾತಿ ಶ್ರೇಷ್ಠ ಒಬ್ಬ ತಂದೆಯಾಗಿದ್ದಾರೆ. ಧರ್ಮ ಸಮ್ಮೇಳನದಲ್ಲಿ ಮೊದಲು ಶ್ರೇಷ್ಠಾತಿ ಶ್ರೇಷ್ಠ ಧರ್ಮ ಬೇಕು. ಆ ಧರ್ಮ ಪ್ರಾಯಃಲೋಪ ಆಗಿ ಬಿಟ್ಟಿದೆ, ಯಾವುದು ಪುನಃ ಈಗ ಸ್ಥಾಪನೆ ಆಗುತ್ತಿದೆ. ಸ್ಥಾಪನೆ ಮಾಡುವವರು ಪರಮಪಿತ ಪರಮಾತ್ಮ ಆಗಿದ್ದಾರೆ. ಅವರಂತೂ ನಿರಾಕಾರ ಆಗಿದ್ದಾರೆ, ಬ್ರಹ್ಮಾರವರ ಮೂಲಕ ಮಾಡುತ್ತಿದ್ದಾರೆ. ಗಾಯನವೂ ಸಹ ಇದೆ ಪರಮಪಿತ ಪರಮಾತ್ಮ ಬ್ರಹ್ಮನ ಮೂಲಕ ಬ್ರಾಹ್ಮಣರನ್ನು ರಚಿಸಿದ್ದಾರೆ. ಕೃಷ್ಣ ಬ್ರಹ್ಮನ ಮೂಲಕ ಬ್ರಾಹ್ಮಣರನ್ನು ರಚನೆ ಮಾಡಿದ್ದಾರೆ ಎಂದು ಹೇಳುವುದಿಲ್ಲ. ಪರಮಪಿತ ಪರಮಾತ್ಮ ಬ್ರಹ್ಮಾರವರ ಮುಖದ ಮೂಲಕ ಬ್ರಾಹ್ಮಣರನ್ನು ರಚನೆ ಮಾಡಿದ್ದಾರೆ ನಂತರ ಅವರೇ ಬ್ರಾಹ್ಮಣ ಸೂರ್ಯವಂಶಿ, ಚಂದ್ರವಂಶಿ ಆಗುತ್ತಾರೆ. ಅಂದಾಗ ಸೂರ್ಯವಂಶಿ, ಚಂದ್ರವಂಶಿ ಧರ್ಮದ ಸ್ಥಾಪನೆ ಆಗುತ್ತಿದೆ. ತಾವು ದೇವೀ-ದೇವತೆ ಧರ್ಮದ ವಂಶಾವಳಿ ಆಗಿದ್ದೀರಿ. ನಿಮಗೆ ಗೊತ್ತಿದೆ ನಮ್ಮ ನಂತರ ಪುನಃ ಸೆಕೆಂಡ್ ನಂಬರ್ ವಂಶಾವಳಿ ಮುಸಲ್ಮಾನರದು ಇರುತ್ತದೆ, ನಂತರ ಬೌದ್ಧರದು ಇರುತ್ತದೆ. ಈ ರೀತಿ ವೃದ್ಧಿ ಆಗುತ್ತದೆ. ಇದೆಲ್ಲವನ್ನೂ ಬುದ್ಧಿಯಲ್ಲಿ ಧಾರಣೆ ಮಾಡಿಕೊಳ್ಳಬೇಕು. ಯಾವುದು ಕಳೆದು ಹೋಗಿದೆ ಅದರ ಶಾಸ್ತ್ರವಾಗುತ್ತದೆ. ಈಗ ಏನಾಗುತ್ತದೆ ಡ್ರಾಮಾ ಶೂಟ್ ಆಗುತ್ತಾ ಹೋಗುತ್ತದೆ. ಪುನಃ ಕಲ್ಪದ ನಂತರ ರಿಪೀಟ್ ಆಗುತ್ತದೆ. ಇಡೀ ಪ್ರಪಂಚದ ನಾಟಕ (ಆಕ್ಷನ್) ಶೂಟ್ ಆಗುತ್ತಿದೆ. ನಂತರ 5000 ವರ್ಷದ ನಂತರ ನಿಮ್ಮ ಪಾತ್ರ ನಡೆಯುತ್ತದೆ. ಇದು ಬಹಳ ತಿಳಿದುಕೊಳ್ಳುವಂತಹ ಮಾತುಗಳಾಗಿದೆ. ಅಂದಾಗ ಶ್ರೇಷ್ಠಾತಿ ಶ್ರೇಷ್ಠ ಶಿವಬಾಬಾ ನಂತರ ಜಗದಂಬಾ ಮತ್ತು ಪ್ರಜಾಪಿತ ಬ್ರಹ್ಮಾ ಮತ್ತು ಅವರ ಮಕ್ಕಳಾಗಿದ್ದಾರೆ. 3 ಸಹೋದರರಿದ್ದಾರೆ ಬಾಕಿ ದೇವೀ-ದೇವತಾ ಧರ್ಮ ದೊಡ್ಡ ಅಣ್ಣ ಇಲ್ಲವೇ ಇಲ್ಲ. ಪ್ರಾಯಃಲೋಪವಾಗಿ ಬಿಟ್ಟಿದೆ. ಯಾವಾಗ ಈ ಧರ್ಮ ಇರುವುದಿಲ್ಲ ಆಗ ಖಂಡಿತ ಪುನಃ ಈ ಧರ್ಮದ ಸ್ಥಾಪನೆ ಆಗಿ ಬಾಕಿ ಎಲ್ಲಾ ಧರ್ಮಗಳು ಸಮಾಪ್ತಿ ಆಗಿ ಬಿಡುತ್ತದೆ. ದೇವೀ-ದೇವತಾ ಧರ್ಮ ಇದೆ ಅಂದಾಗ ಬೇರೆ ಸಹೋದರ ಧರ್ಮಗಳು ಇರುವುದಿಲ್ಲ. ಈ ರೀತಿ ನಂತರ ಆಗುತ್ತದೆ. ಒಬ್ಬ ತಂದೆ ರಚಯಿತನಾಗಿದ್ದಾರೆ ಮತ್ತು ಒಂದೇ ರಚನೆಯಾಗಿದೆ. ತಂದೆ ಹೇಳುತ್ತಾರೆ - ನಾನು ಪುನಃ ರಾಜಯೋಗವನ್ನು ಕಲಿಸಲು ಬಂದಿದ್ದೇನೆ. ನಿಮಗೆ ಗೊತ್ತಿದೆ -

ವಿನಾಶಕ್ಕಾಗಿ ಮಹಾಭಾರತ ಯುದ್ಧವೂ ಸಹ ನಿಂತಿದೆ.

ತಾವು ಮಕ್ಕಳು ಡ್ರಾಮಾವನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಿ. ಇದೆಲ್ಲಾ ವಿದ್ಯೆಯ ಮಾತುಗಳಾಗಿದೆ. ಇಲ್ಲಿ ಅಂತಹ ವಸ್ತುಗಳು ಯಾವುದೂ ಇರುವುದಿಲ್ಲ ಯಾವುದನ್ನು ಕಳ್ಳರು ಬಂದು ಅವರಿಂದ ಚಿನ್ನ ಮುಂತಾದವನ್ನು ಕಳ್ಳತನ ಮಾಡುವ ವಸ್ತುಗಳು ಇರುವುದಿಲ್ಲ. ಇದು ಪಾಠಶಾಲೆಯಾಗಿದೆ. ಪಾಠಶಲೆಯಲ್ಲಿ ಪುಸ್ತಕಗಳು, ಮ್ಯಾಪ್ ಮುಂತಾದವು ಇರುತ್ತವೆ. ಇದೂ ಸಹ ಪಾಠಶಾಲೆಯಾಗಿದೆ. ಇದು ಮ್ಯಾಪ್ ಆಗಿದೆ. ಭಯ ಪಡುವ ಯಾವುದೇ ಮಾತಿಲ್ಲ. ಕಳ್ಳ ಬಂದು ಏನು ಮಾಡುತ್ತಾನೆ! ಯಾವುದೂ ವಸ್ತುವೇ ಇಲ್ಲ. ಬಾಕಿ ಗಾಯನವು ಇದೆ - ಕೆಲವರದು ಮಣ್ಣು ಪಾಲಾಯಿತು...... ತಂದೆ ತಿಳಿಸುತ್ತಿದ್ದಾರೆ. ಎಷ್ಟೇ ಲಕ್ಷಾದಿಪತಿ ಆಗಲಿ, ಕೋಟ್ಯಾದಿಪತಿ ಆಗಲಿ, ಬಹಳ ಶ್ರೀಮಂತರು (ಮಲ್ಟಿಮಿಲ್ಯನರ್) ಆಗಲಿ, ಧನವೆಲ್ಲಾ ಮಣ್ಣಿನಲ್ಲಿ ಹೋಗಿ ಸೇರುತ್ತದೆ. ನಿಮ್ಮದು ಸತ್ಯ ಸಂಪಾದನೆಯಾಗಿದೆ. ಎಲ್ಲರಿಗಿಂತ ಮಲ್ಟಿ ಮಿಲ್ಯನರ್ಸ್ (ಬಹಳ ಶ್ರೀಮಂತರು) ತಾವಾಗಿದ್ದೀರಿ. ತಾವು ಈ ಸಂಪಾದನೆಯನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತೀರಿ. ನಿಮಗೆ ಗೊತ್ತಿದೆ - ನಾವು ಎಲ್ಲವನ್ನು ಸ್ವರ್ಗದಲ್ಲಿ ಟ್ರಾನ್ಸಫರ್ ಮಾಡುತ್ತೇವೆ. ಬಾಬಾನಿಗೆ ಹೇಳುತ್ತಾರೆ - ಬಾಬಾ ನಮಗೆ ಪುನಃ ಸ್ವರ್ಗದಲ್ಲಿ ಕೊಡಬೇಕು. ಬಡ್ಡಿ ಸಹಿತವಾಗಿ ಕವಡೆ ಬದಲಾಗಿ ವಜ್ರವನ್ನು ಕೊಡಬೇಕು. ಎಷ್ಟು ತಿಳಿದುಕೊಳ್ಳುವಂತಹ ಮಾತುಗಳಾಗಿವೆ. ಆದರೂ ಶ್ರೀಮತದ ಮೇಲೆ ನಡೆಯಬೇಕು. ಗೃಹಸ್ಥ ವ್ಯವಹಾರವನ್ನೂ ಸಹ ಸಂಭಾಲನೆ ಮಾಡಬೇಕು, ಆದರೆ ಶ್ರೀಮತದ ಮೇಲೆ ನಡೆಯಬೇಕು. ಮನುಷ್ಯರು ಬಹಳ ಖರ್ಚು ಮಾಡುತ್ತಾರೆ. ಸಾಲವನ್ನೂ ಸಹ ಮಾಡಿ ತೀರ್ಥ ಯಾತ್ರೆಗಳಿಗೆ ಹೋಗುತ್ತಾರೆ. ಅದೆಲ್ಲಾ ಭಕ್ತಿಮಾರ್ಗದ ಸಾಮಾಗ್ರಿ ಆಗಿದೆ. ಇದೆಲ್ಲವೂ ಸಹ ಅನಾದಿ ಆಗಿದೆ. ಬೀಳಿಸಲೂ ಸಹ ಯಾವುದಾದರೂ ಬೇಕಲ್ಲವೇ. ತಮೋಪ್ರಧಾನದಲ್ಲಿ ಹೋಗಲೇಬೇಕು. ಆಗ ನಾನು ಬಂದು ತಿಳಿಸುತ್ತೇನೆ - ತಾವು ಎಷ್ಟು ನಿಂದನೆ ಮಾಡಿದ್ದೀರಿ, ಆದ್ದರಿಂದ ದುರ್ಗತಿಯನ್ನು ಪಡೆದುಕೊಂಡಿದ್ದೀರಿ. ಪುನಃ ಅದೇ ನಡೆಯುತ್ತದೆ ಯಾವುದು ಕಲ್ಪ-ಕಲ್ಪವು ನಡೆಯುತ್ತದೆ. ಜ್ಞಾನ ಮತ್ತು ಭಕ್ತಿಯಾಗಿದೆ. ಯಾವಾಗ ಪೂರ್ತಿ ದುರ್ಗತಿ ಆಗುತ್ತದೆ ಆಗ ಸರ್ವರ ಸದ್ಗತಿಗಾಗಿ ತಂದೆ ಬರಬೇಕಾಗುತ್ತದೆ. ಜಪ ಮುಂತಾದವನ್ನು ಮಾಡುತ್ತಾ-ಮಾಡುತ್ತಾ ಕಲೆಗಳು ಕಡಿಮೆ ಆಗುತ್ತಾ ಹೋಗುತ್ತದೆ. ಪೂರ್ತಿ ಕಪ್ಪಾಗಿ ಬಿಡುತ್ತಾರೆ ಪುನಃ ರಾತ್ರಿ ನಂತರ ಹಗಲು ಬರುತ್ತದೆ. ಇದು ಪೂರ್ತಿ ಡ್ರಾಮಾ ಬುದ್ಧಿಯಲ್ಲಿ ಇರಬೇಕು. ಮನುಷ್ಯರು ಯಾವ ಜ್ಞಾನವನ್ನು ತಿಳಿದುಕೊಳ್ಳುವುದಿಲ್ಲ ಕೇವಲ ನೋಡಿಯೇ ವಾಹ್-ವಾಹ್ ಎನ್ನುತ್ತಾರೆ. ಹೊರಗೆ ಹೋದರೆ ಎಲ್ಲಾ ಸಮಾಪ್ತಿ ಆಗಿ ಬಿಡುತ್ತದೆ. ಎಷ್ಟು ಪ್ರದರ್ಶಿನಿ ಆಗಿದೆ, ಒಬ್ಬರೂ ನಿಶ್ಚಯಬುದ್ಧಿ ಆಗಲಿಲ್ಲ. ಭಲೆ ತಿಳಿದುಕೊಳ್ಳಲು ಬರುತ್ತಾರೆ ಆದರೆ ಒಬ್ಬರೂ ನಿಶ್ಚಯಬುದ್ಧಿಯವರು ಒಬ್ಬರೂ ಇಲ್ಲ. ಮಾಯೆ ಪೂರ್ತಿ ನಿಶ್ಚಯದಲ್ಲಿ ಇರಲು ಬಿಡುವುದಿಲ್ಲ. ಹೇಗೆ ಬಂಧನದಲ್ಲಿ ಇರುವ ಗೋಪಿಕೆಯರು (ಕುಮಾರಿಯರು) ಮನೆಯಲ್ಲಿ ಕುಳಿತು ಬರೆಯುತ್ತಾರೆ - ಬಾಬಾ ನಾವಂತೂ ನಿಮ್ಮವರಾಗಿ ಬಿಟ್ಟಿದ್ದೇವೆ, ತಮ್ಮನ್ನು ತಿಳಿದುಕೊಂಡು ಬಿಟ್ಟಿದ್ದೇವೆ, ನಾವು ನಿಮಗಾಗಿಯೇ ಇದ್ದೇವೆ. ಸಾಯುತ್ತೇನೆ ಆದರೆ ಎಂದೂ ಮದುವೆ ಮಾಡಿಕೊಳ್ಳುವುದಿಲ್ಲ. ಬಂಧನದ ಕಾರಣ ಬರಲು ಸಾಧ್ಯವಿಲ್ಲ. ಸ್ವಲ್ಪ ಜ್ಞಾನ ತಿಳಿಸುವುದರಿಂದ ಬಂದು ಬಿಡುತ್ತಾರೆ. ಆದರೆ ಕೆಲವರು 10-20 ವರ್ಷಗಳು ತಲೆ ಕೆಡಿಸುಕೊಂಡರೂ ತಿಳಿದುಕೊಳ್ಳುವುದಿಲ್ಲ. ಇಲ್ಲಂತೂ ಬಾಬಾ 21 ಜನ್ಮಗಳಿಗಾಗಿ ಪ್ರಾಣದಾನವನ್ನು ಕೊಡುತ್ತಾರೆ. ಮೃತ್ಯುವಿನ ಮೇಲೆ ಜಯ ಗಳಿಸಿಸುತ್ತಾರೆ. ಅಲ್ಲಿ ಅಕಾಲ ಮೃತ್ಯು ಎಂದೂ ಆಗುವುದಿಲ್ಲ. ಅಂದಾಗ ಎಷ್ಟು ಬಾಬಾರವರ ಶ್ರೀಮತದ ಮೇಲೆ ನಡೆಯಬೇಕು, ದಾನವನ್ನು ಕೊಡಬೇಕು. ಅನ್ಯರದೂ ಸಹ ಜೀವನವನ್ನು ವಜ್ರ ಸಮಾನ ಮಾಡಬೇಕು. ಭಲೆ ತಮ್ಮ-ತಮ್ಮ ಅದೃಷ್ಟವಾಗಿದೆ ಆದರೂ ಮುರಳಿಯಂತೂ ಅವಶ್ಯವಾಗಿ ಓದಬೇಕು. ಮುರಳಿಯಂತೂ ಎಲ್ಲಿಂದಲಾದರೂ ಸಿಗುತ್ತದೆ. ಒಂದು ದಿನ ಬಹಳ ಭಾಷೆಗಳಲ್ಲಿ ಮುರಳಿ ಬರುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸ್ವಯಂನ ಉನ್ನತಿಗಾಗಿ ತಮ್ಮ ಚಲನೆ ಮತ್ತು ವಿದ್ಯೆಯ ಸತ್ಯ ಸಮಾಚಾರವನ್ನು ತಂದೆಗೆ ಕೊಡಬೇಕು. ತಮ್ಮ ಮತ್ತು ಸರ್ವರ ಜೀವನವನ್ನು ವಜ್ರ ಸಮಾನ ಮಾಡಬೇಕಾಗಿದೆ.

2. ಗೃಹಸ್ಥ ವ್ಯವಹಾರವನ್ನು ಸಂಭಾಲನೆ ಮಾಡುತ್ತಾ ಶ್ರೀಮತದಂತೆ ಪೂರ್ತಿ ನಡೆಯಬೇಕು. ಬುದ್ಧಿವಂತರಾಗಿ ತಮ್ಮದೆಲ್ಲವನ್ನು ಸ್ವರ್ಗಕ್ಕಾಗಿ ಟ್ರಾನ್ಸ್ಫರ್ (ಪರಿವರ್ತನೆ) ಮಾಡಿಕೊಳ್ಳಬೇಕು.

ವರದಾನ: ತಂದೆಯ ಛತ್ರಛಾಯೆಯ ಕೆಳಗೆ ಸದಾ ಸುರಕ್ಷತೆಯ ಅನುಭವ ಮಾಡುವಂತಹ ಸರ್ವ ಆಕರ್ಷಣಾ ಮುಕ್ತ ಭವ.

ಹೇಗೆ ಸ್ಥೂಲ ಪ್ರಪಂಚದಲ್ಲಿ ಬಿಸಿಲು ಅಥವಾ ಮಳೆಯಿಂದ ಪಾರಾಗಲು ಛತ್ರಛಾಯೆಯ ಆಧಾರವನ್ನು ಪಡೆಯುತ್ತಾರೆ, ಅದು ಸ್ಥೂಲ ಛತ್ರಛಾಯೆಯಾಗಿದೆ, ಇದು ತಂದೆಯ ಛತ್ರಛಾಯೆಯಾಗಿದೆ, ಅದು ಆತ್ಮನನ್ನು ಪ್ರತೀ ಸಮಯದಲ್ಲಿಯೂ ಸುರಕ್ಷಿತವಾಗಿ ಇಡುತ್ತದೆ. ಅದರಿಂದ ಯಾವುದೇ ಆಕರ್ಷಣೆಯು ತನ್ನ ಕಡೆಗೆ ಆಕರ್ಷಿಸಲು ಸಾಧ್ಯವಿಲ್ಲ. ಹೃದಯದಿಂದ ಬಾಬ ಎಂದು ಹೇಳಿದರು ಮತ್ತು ಸುರಕ್ಷಿತವಾಗಿ ಬಿಟ್ಟರು. ಭಲೆ ಎಂತಹ

ಪರಿಸ್ಥಿತಿಯೇ ಬರಲಿ, ಛತ್ರಛಾಯೆಯಲ್ಲಿ ಇರುವವರು ಸದಾ ಸುರಕ್ಷತೆಯ ಅನುಭವ ಮಾಡುತ್ತಾರೆ. ಮಾಯೆಯ ಪ್ರಭಾವವು ಕಿಡಿಯಷ್ಟೂ ಬರಲು ಸಾಧ್ಯವಿಲ್ಲ.

ಸ್ಲೋಗನ್: ಇಂತಹ ಸ್ವ-ರಾಜ್ಯ ಅಧಿಕಾರಿ ಆಗಿರಿ, ಅದರಿಂದ ಅಧೀನತೆಯೇ ಸಮಾಪ್ತಿಯಾಗಿ ಬಿಡಲಿ.